# ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ , ಉತ್ತರ ಕನ್ನಡ , ಕಾರವಾರ

## ಸೆಷನ್ಸ್ ಕೇಸ್ ನಂ. 17/2018

ಫಿರ್ಯಾದಿ – ಸರ್ಕಾರ – ಭಟ್ಕಳ ಶಹರ ಪೋಲೀಸ್ ಠಾಣೆ

**ವಿರುದ್ಧ**

ಆರೋಪಿ – ವೆಂಕಟ್ರಮಣ ತಂದೆಃ ಮಂಜಪ್ಪ ಯಾನೆ ಸಣ್ಣಹುಡುಗ ನಾಯ್ಕ

## ದೋಷಾರೋಪಣೆ

ಶ್ರೀಮತಿ ವಿಪುಲ ಎಂ ಬಿ ಪೂಜಾರಿ , ಬಿ.ಎ., ಎಲ್ ಎಲ್ ಬಿ., ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಉತ್ತರ ಕನ್ನಡ , ಕಾರವಾರ ಆದ ನಾನು

ವೆಂಕಟ್ರಮಣ ತಂದೆಃ ಮಂಜಪ್ಪ ಯಾನೆ ಸಣ್ಣಹುಡುಗ ನಾಯ್ಕ
ವಯಸ್ಸುಃ 64 ವರ್ಷ, ಉದ್ಯೋಗಃ ಚಾಲಕ
ಸಾಃ ಸೋನಾರಕೇರಿ , ಭಟ್ಕಳ

ನಿಮ್ಮ ವಿರುದ್ಧ ಆಪಾದಿಸುವುದೇನೆಂದರೆಃ

ದಿನಾಂಕಃ 01.02.2017 ರಂದು 21.15 ಗಂಟೆಯ ಸಮಯಕ್ಕೆ ಭಟ್ಕಳ ಶಹರ ಪೋಲೀಸ ಠಾಣಾ ಸರಹದ್ದಿನಲ್ಲಿ ಬರುವ ಭಟ್ಕಳದ ಸೋನಾರ ಕೇರಿಯಲ್ಲಿರುವ ಫಿರ್ಯಾದಿ ಚಾಸಾ.1 ಶ್ರೀಮತಿ ಸುವರ್ಣಾ ಕೋಂ ಮಂಜುನಾಥ ಶೇಟ್ ಇವರ ಭಾವನ ಮನೆಯಾದ ಮನೆ ನಂ.1489 ನೇದರಲ್ಲಿ ಆರೋಪಿಯಾದ ನೀವು ಮನೆಯ ಹಿಂದಿನ ಬಾಗಿಲಿನಿಂದ ಮನೆಯೊಳಗೆ ಅತಿಕ್ರಮ ಪ್ರವೇಶ ಮಾಡಿ , ತನ್ಮೂಲಕ ಭಾರತೀಯ ದಂಡ ಸಂಹಿತೆ ಕಲಂ 448 ರನ್ವಯ ದಂಡನೀಯವಾದ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದೊಳಗೆ ಮಾಡಿರುವಿರಿ .

ಎರಡನೇಯದಾಗಿ, ಮೇಲೆ ಹೇಳಿದ ದಿನ, ಸ್ಥಳ ಹಾಗೂ ವೇಳೆಯಂದು ಆರೋಪಿಯಾದ ನೀವು ಫಿರ್ಯಾದಿ ಚಾಸಾ .1 ಇವರ ಭಾವನ ಮನೆಯೊಳಗೆ ಅಕ್ರಮ ಪ್ರವೇಶ ಮಾಡಿದ್ದಲ್ಲದೇ ಚಾಸಾ.8 ರುಕ್ಮಾಬಾಯಿ ಶೇಟ್ ಇವರ ಹತ್ತಿರ ಸರಾಯಿ ಕುಡಿಯಲು ಹಣ ಕೇಳಿದ್ದು , ಚಾಸಾ.8 ರವರು ಹಣವನ್ನು ಕೊಡಲು ನಿರಾಕರಿಸಿದಾಗ ಅವರನ್ನು ಶಾಂತಿಭಂಗವನ್ನು ಉಂಟುಮಾಡಲು ಉದ್ರೇಕಿಸುವ ಉದ್ದೇಶದಿಂದ ಚಾಸಾ.8 ರವರನ್ನು ಉದ್ದೇಶಿಸಿ "ಬೋಸಡಿ ರಂಡೆ" ಎಂದು ಅವಾಚ್ಯ

ಶಬ್ದಗಳಿಂದ ಬೈದು, ತನ್ಮೂಲಕ ಭಾರತೀಯ ದಂಡ ಸಂಹಿತೆ ಕಲಂ 504 ರನ್ವಯ ದಂಡನೀಯವಾದ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದೊಳಗೆ ಮಾಡಿರುವಿರಿ .

ಮೂರನೇಯದಾಗಿ, ಮೇಲೆ ಹೇಳಿದ ದಿನ, ಸ್ಥಳ ಹಾಗೂ ವೇಳೆಯಂದು ಆರೋಪಿಯಾದ ನೀವು ಚಾಸಾ.8 ರವರ ಮನೆಗೆ ಅಕ್ರಮ ಪ್ರವೇಶ ಮಾಡಿ ,ಅವರಲ್ಲಿ ಹಣ ಕೇಳಿ , ಅವರು ಹಣ ಕೊಡಲು ನಿರಾಕರಿಸಿದಾಗ ಅವರನ್ನು ಅವಾಚ್ಯವಾಗಿ ಬೈದಿದ್ದಲ್ಲದೇ , ನಿನ್ನನ್ನು ಕೊಂದು ಹಾಕುತ್ತೇನೆ ಅಂತಾ ಹೇಳಿ ಕೈಯಲ್ಲಿದ್ದ ಕಟ್ಟಿಗೆಯ ತುಂಡಿನಿಂದ ಚಾಸಾ .8 ರವರ ತಲೆಯ ಮೇಲೆ ಹೊಡೆದು ಮಾರಣಾಂತಿಕ ಹಲ್ಲೆ ಮಾಡಿ ಸಾದಾ ಸ್ವರೂಪದಗಾಯಗೊಳಿಸಿ ಅವರನ್ನು ಕೊಲೆ ಮಾಡಲು ಪ್ರಯತ್ನಿಸಿ ತನ್ಮೂಲಕ ಭಾರತೀಯ ದಂಡ ಸಂಹಿತೆ ಕಲಂ 307 ರ ಮೇರೆಗೆ ದಂಡನೀಯವಾದ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದೊಳಗೆ ಮಾಡಿರುವಿರಿ .

ಸದರಿ ಆರೋಪದ ಮೇಲೆ ನೀವು ಈ ನ್ಯಾಯಾಲಯದಿಂದ ಆರೋಪ ವಿಚಾರಣೆಗೆ ಗುರಿಯಾಗತಕ್ಕದೆಂದು ನಾನು ಈ ಮೂಲಕ ನಿರ್ದೇಶಿಸುತ್ತೇನೆ..

ದಿನಾಂಕಃ 06 ನೇ ಮಾರ್ಚ 2020.

(ವಿಪುಲ ಎಂ.ಬಿ.ಪೂಜಾರಿ)
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಉತ್ತರ ಕನ್ನಡ , ಕಾರವಾರ .

**<u>ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ , ಉತ್ತರ ಕನ್ನಡ , ಕಾರವಾರ</u>**

**<u>ಸೆಷನ್ಸ್ ಕೇಸ್ ನಂ. 17/2018</u>**

ಫಿರ್ಯಾದಿ – ಸರ್ಕಾರ – ಭಟ್ಕಳ ಶಹರ ಪೋಲೀಸ್ ಠಾಣೆ

**ವಿರುದ್ಧ**

ಆರೋಪಿ – ವೆಂಕಟ್ರಮಣ ತಂದೆಃ ಮಂಜಪ್ಪ ಯಾನೆ ಸಣ್ಣಹುಡುಗ ನಾಯ್ಕ

**<u>ದೋಷಾರೋಪಣೆ</u>**

ಆರೋಪಿಯ ಹೆಸರು – ವೆಂಕಟ್ರಮಣ

ತಂದೆಯ ಹೆಸರು – ಮಂಜಪ್ಪ ಯಾನೆ ಸಣ್ಣಹುಡುಗ ನಾಯ್ಕ

ವಯಸ್ಸು – ವರ್ಷ

ಉದ್ಯೋಗ – ಚಾಲಕ

ವಾಸ – ಸೋನಾರಕೇರಿ , ಭಟ್ಕಳ

**<u>ಆರೋಪಿಯ ಹೇಳಿಕೆ</u>**

ಪ್ರಶ್ನೆಃ ನಿಮ್ಮ ಮೇಲೆ ಮಾಡಿದ ದೋಷಾರೋಪಣೆಯ ವಿವರಗಳು ನಿಮಗೆ ತಿಳಿಯಿತೆ?
ಉತ್ತರಃ

ಪ್ರಶ್ನೆಃ ನೀವು ತಪ್ಪು ಒಪ್ಪಿಕೊಳ್ಳುತ್ತಿರೋ ಅಥವಾ ವಿಚಾರಣೆ ಆಗಬೇಕೆಂದು ಬಯಸುತ್ತಿರಾ?
ಉತ್ತರಃ

ಮೇಲೆ ಹೇಳಿದ ದೋಷಾರೋಪಣೆಗಳನ್ನು ಆರೋಪಿಗೆ ಓದಿ ಹೇಳಿ ಅವರು ಕೊಟ್ಟ ಉತ್ತರವನ್ನು ಬರೆದುಕೊಳ್ಳಲಾಯಿತು..

ದಿನಾಂಕಃ 06 ನೇ ಮಾರ್ಚ 2020

ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಉತ್ತರ ಕನ್ನಡ , ಕಾರವಾರ .